**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧನ್ಯಾದಂ ರವರ ನ್ಯಾಯಾಲಯ, ಕೊಳ್ಳೇಗಾಲ.**

**ಸಿಸಿ ನಂ. 277 / 2018**

| | | |
|---|---|---|
| ಸಾಕ್ಷಿಯ ಹೆಸರು | : ಸೈಯದ್ ಅಕ್ರಂ | |
| ತಂದೆಯ ಹೆಸರು | : ಸೈಯದ್ ಕಲೀಲ್ | |
| ವಯಸ್ಸು | : 41 ವರ್ಷ | |
| ಉದ್ಯೋಗ | : ವ್ಯಾಪಾರ | ಚಾಸಾ –10 |
| ವಾಸ ಸ್ಥಳ | : ಕೊಳ್ಳೇಗಾಲ | ಪ್ರಾಸಾ –9 |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾದ ದಿನಾಂಕಃ 14.10.2025**

**ಮುಖ್ಯ ವಿಚಾರಣೆ – ಮಾನ್ಯ ಸ.ಸ.ಅ. ರವರಿಂದ**

ನಾನು ಆರೋಪಿಯನ್ನು ನೋಡಿದ್ದೇನೆ ಆತ ನನಗೆ ಅಷ್ಟು ಪರಿಚಯವಿಲ್ಲ. ಅಮಾನತ್ತು ಮಹಜರಿನಲ್ಲಿರುವ ಸಹಿ ನನ್ನದಿರುತ್ತದೆ. ಸಾಕ್ಷಿಗೆ ಅಮಾನತ್ತು ಮಹಜರನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–5 ಎಂದು ಸಾಕ್ಷಿ ಸಹಿಯನ್ನು ನಿಪಿ–5(ಎ) ಎಂದು ಗುರುತಿಸಲಾಯಿತು. ಸುಮಾರು ಐದಾರು ವರ್ಷಗಳ ಹಿಂದೆ ಪೋಲಿಸರು ನಮ್ಮ ಬೀದಿಗೆ ಬಂದು ಅಲಿವುಲ್ಲಾ ಬೇಗ್ ಗೊತ್ತಾ ಎಂದು ಕೇಳಿದ್ದು ಆಗ ನಾನು ಗೊತ್ತು ಎಂದು ಹೇಳಿದ್ದೆ. ನಂತರ ನನ್ನನ್ನು ಠಾಣೆಗೆ ಪೋಲಿಸರು ಕರೆದುಕೊಂಡು ಹೋಗಿದ್ದು ಅಲ್ಲಿ ನಾನು 25 ಸಾವಿರಗಳನ್ನು ಪೋಲಿಸರಿಗೆ ನೀಡುವಾಗ ಪೋಟೋ ತೆಗೆದು ನಂತರ ನನ್ನ ಸಹಿಯನ್ನು ಪಡೆದಿರುತ್ತಾರೆ. ಆ ಸಮಯದಲ್ಲಿ ನನ್ನ ಅಣ್ಣ ಮತ್ತು ನನ್ನ ತಂದೆಯವರು ಠಾಣೆಗೆ ಬಂದಿರುತ್ತಾರೆ. ಆರೋಪಿ ಮತ್ತು ನನ್ನ ಮಧ್ಯೆ ಯಾವುದೇ ಹಣದ ವ್ಯವಹಾರಗಳು ನಡೆದಿರುವುದಿಲ್ಲ. ಸಾಕ್ಷಿಯು 8 ಪೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ–6 ರಿಂದ ನಿಪಿ–13 ಎಂದು ಗುರುತಿಸಲಾಯಿತು. ಪೋಲಿಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿರುತ್ತಾರೆ.

**ಪಾಟೀ ಸವಾಲು – ಆರೋಪಿ ಪರ ವಕೀಲರಿಂದ**

ನನಗೆ ಪೋಲಿಸರು ನೋಟಿಸ್ ಕೊಟ್ಟು ಮಹಜರಿಗೆ ಕರೆದಿರುತ್ತಾರೆ. ಆರೋಪಿ ಜೊತೆ ನನಗೆ ಹಣದ ವ್ಯವಹಾರ ಮೊದಲಿನಿಂದ ಇರುವುದಿಲ್ಲ. ಪೋಲಿಸರು ಸ್ಟೇಷನ್ ಹೊರಗಡೆ ದುಡ್ಡು ಕೊಟ್ಟು ಆರೋಪಿಗೆ ಸ್ಯೂರಿಟಿಗೆ ಎಂದು ಠಾಣೆಯೊಳಗಡೆ ದುಡ್ಡು ಕೊಡಿ ಎಂದು ಹೇಳಿದರು. ಅದೇ ರೀತಿ ನಾನು ಠಾಣೆಯೊಳಗಡೆ ದುಡ್ಡು ಕೊಟ್ಟಾಗ ಪೋಟೋ ತೆಗೆದರು.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ. ಕೊಳ್ಳೇಗಾಲ.